16

# ತತ್ವ ಸಂಬಂಧವಾದ ವಿಷಯಗಳನ್ನು ಎದುರಿಸುವುದು

ಸಭೆಯ ನಾಯಕರು ಎದುರಿಸಿದ ಎಲ್ಲಾ ಆಹ್ವಾನಗಳಲ್ಲಿ, ಸಭೆಯಲ್ಲಿ ತತ್ವ ಸಂಬಂಧ ವಾದ ಭಿನ್ನಾಭಿಪ್ರಾಯಗಳು ಹೆಚ್ಚು ಒತ್ತಡದವುಗಳಾಗಿರುತ್ತವೆ. ತತ್ವಗಳ ಬಗ್ಗೆ ಭಿನ್ನಾಭಿಪ್ರಾಯಗಳು ಮುರಿದು ಹೋದ ಸಹೋದರತ್ವಗಳನ್ನು, ಒಡೆದು ಹೋದ ಸಭೆಗ ಳನ್ನು, ವಿಭಾಗಿಸಲ್ಪಟ್ಟ ಮನೆಗಳನ್ನು, ಮುರಿದ ಹೃದಯಗಳನ್ನು, ಪ್ರತಿಕ್ರಿಯೆ ತೋರಿಸದ ಸಮಾಜಗಳನ್ನು ಮತ್ತು ತಪ್ಪಿಹೋದ ಪ್ರಾಣಗಳನ್ನು ಒಳಗೊಂಡಿರಬಹುದು. ಸ್ಥಳಿಕ ಸಭೆಯಲ್ಲಿ ತತ್ವಗಳ ಬಗ್ಗೆ ಭಿನ್ನಾಭಿಪ್ರಾಯಗಳು ಬರುವಾಗ ಏನು ಮಾಡಬಹುದು?

ತತ್ವಗಳ ಚರ್ಚೆಗಳನ್ನು ಕುರಿತು ಹಿರಿಯರು ಒಂದು ರೀತಿಯಲ್ಲಿ ವರ್ತಿಸುವುದು ನಾವು ಹೇಳಿದ್ದಕ್ಕೆ ಅಸಂಬದ್ಧವಾದ ರೀತಿಯಲ್ಲಿ ತೋರಬಹುದು. ಹಿರಿಯರು ಕುರುಬರಂತೆ ತಮ್ಮ ಜೋಪಾಸನೆಯಲ್ಲಿ ಇರುವವರನ್ನು ಪ್ರೇರೇಪಣೆ ಮತ್ತು ಒಡಂಬಡಿಸುವಿಕೆಯಿಂದ ನಡಿಸಬೇಕೆಂದು ಒತ್ತಿ ಹೇಳಿದ್ದೇವೆ. ಅತ್ಯುತ್ತಮವಾದ ಮಾರ್ಗ ತೆಗೆದುಕೊಳ್ಳಲು ಒಮ್ಮತಕ್ಕೆ ತಲುಪಲು ಸಹಾಯ ಮಾಡುವದರಿಂದ ಹಿರಿಯರು ಸಭೆಯ ಸದಸ್ಯರಿಗೆ ಸಾಮಾನ್ಯವಾಗಿ ಮಾರ್ಗದರ್ಶನ ಮಾಡತಕ್ಕದ್ದು. ಹೀಗಿದ್ದರೂ, ಸಭೆಯ ಹಿರಿಯರು ಕಾರ್ಯ ಕೈ ಗೊಳ್ಳುವ ಸಮಯ ಬರಬಹುದು, ಅದು ಸಭೆಯಲ್ಲಿ ನಂಬಿಕೆಯ ಒಮ್ಮತ ಗುರುತಿಸುವದರಿಂದ ಅಲ್ಲ, ಆದರೆ ಅಧಿಕೃತತೆಯಿಂದ ಬರಬಹುದು! ಸಭೆಯಲ್ಲಿ ಒಬ್ಬನು ಸತ್ಯದಿಂದ ದೂರ ತಿರುಗಿಕೊಂಡು ಜನರು ತಪ್ಪಿ ಹೋಗುವಂತೆ ಕಾರಣ ಬರುವಾಗ ಬಹುದಾದಂಥ ತತ್ವಗಳನ್ನು ಬೋಧಿಸಲು ಮತ್ತು ಆಚರಿಸಲು ಪ್ರಾರಂಭಿಸುವ ಸಮಯ ಬರುತ್ತದೆ!

ಅದು ಸಂಭವಿಸುವಾಗ ಕುರುಬನ ರೂಪಕವು ಇನ್ನೂ ಅನ್ವಯಿಸುತ್ತದೆ. ಆಗ ಕುರುಬನು ಕುರಿಗಳೊಂದಿಗೆ ಮೃದುವಾಗಿ ವರ್ತಿಸುವವನು, ದೇವರ ಕುರಿ ಮಂದೆಯನ್ನು ಹಾಳು ಮಾಡುತ್ತಿರುವ "ಕ್ರೂರವಾದ ತೋಳಗಳನ್ನು" ಸೋಲಿಸುವದಕ್ಕಾಗಿ, ಬೈಬಲಿನ, ನ್ಯಾಯ ವಾದ, ಮತ್ತು ನೈತಿಕವಾದದ್ದನ್ನು ಅಗತ್ಯವಾದದ್ದೆಲ್ಲವನ್ನೂ ಮಾಡುವನು (ಅಪೊಸ್ತಲರ ಕೃತ್ಯಗಳು 20:29, 30). ಅದೇ ಕುರುಬನು ಕಳೆದು ಕೊಂಡ ಕುರಿಯನ್ನು ಕಂಡುಕೊಂಡು ತನ್ನ ಹೆಗಲ ಮೇಲೆ ಹಾಕಿಕೊಂಡು ಮನೆಗೆ ತರುವನು (ಲೂಕ 15:4-6) ಇದು ದಾವೀದ ನಂತೆ, ಮಂದೆಯ ಮೇಲೆ ಬೇಟೆಮಾಡಲು ಬರುವ "ಸಿಂಹಗಳನ್ನು" ಮತ್ತು "ಕರಡಿಗಳನ್ನು" ನಾಶಮಾಡಲು ಉಪಯೋಗಿಸುವಂತೆ ಇರುತ್ತದೆ (1 ಸಮುವೇಲ 17:34-36). ಮಂದೆಯನ್ನು ಕೊಳ್ಳೆ ಹೊಡೆಯುವವರಿಂದ ರಕ್ಷಿಸುವುದು; ಕುರಿಗಳನ್ನು ಮೇಯಿಸುವುದು, ನಡಿಸುವುದು, ಹುಡುಕುವುದು ಮತ್ತು ಅವುಗಳನ್ನು ಆದರಿಸುವುದು ಕುರುಬನ ಕರ್ತವ್ಯದ ಭಾಗವಾಗಿ ರುವುದು.

ಪ್ರತಿಯೊಂದು ತತ್ವದ ವಿರೋಧಗಳ ಚರ್ಚೆಯು ಕಠಿಣವಾದ ಕಾರ್ಯಕ್ಕೆ ಕರೆ ಕೊಡುವದಿಲ್ಲ. ತತ್ವದ ಭಿನ್ನತೆಗಳು ಮಾಡಬಾರದೇ ಇರಬೇಕಾದವುಗಳು ಸಭೆಗಳನ್ನು ವಿಭಜಿಸಿದ್ದು ದುಃಖಕರವಾದದ್ದು ಆದರೆ ಸತ್ಯವಾದದ್ದಾಗಿದೆ. ತತ್ವದ ವಿಷಯಗಳನ್ನು ಎದುರಿಸುವಾಗ ಹೀಗೆ ಸಭೆಯ ನಾಯಕರು ಬುದ್ಧಿವಂತಿಕೆಯಿಂದ ಕೆಲಸ ಮಾಡತಕ್ಕದ್ದು.

ನಿರ್ದಿಷ್ಟವಾಗಿ ಅವರು, (1) ತಾತ್ವಿಕವಾದ ಸಂಗತಿಗಳ ಚರ್ಚೆಗಳು ಏಳದಂಥ ರೀತಿಯಲ್ಲಿ ನಡಿಸುವದಕ್ಕೆ, ಮತ್ತು (2) ಅವು ಸಂಭವಿಸುವಾಗ ಸಮಸ್ಯೆಗ ಳನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುವದಕ್ಕೆ ಜವಾಬ್ದಾರರಾಗಿರತಕ್ಕದ್ದು. ಅವರು ತತ್ವದ ಸಮಸ್ಯೆಗಳನ್ನು ತಡೆಗಟ್ಟಲಿಕ್ಕೆ ಮತ್ತು ಬಗೆಹರಿಸಲಿಕ್ಕೆ ಕರೆಯಲ್ಪಟ್ಟಿದ್ದಾರೆ.

## ತತ್ವದ ಸಮಸ್ಯೆಗಳನ್ನು ತಡೆಗಟ್ಟುವುದು

ತತ್ವದ ಸಮಸ್ಯೆಗಳಿಗೆ ಸಂಬಂಧಿಸಿ. ತಡೆಗಟ್ಟುವಿಕೆಯು "ಉತ್ತಮವಾದ ಗುಣಪಡಿ ಸುವಿಕೆಯಾಗಿದೆ." ತತ್ವದ ಸಮಸ್ಯೆಗಳನ್ನು ತಡೆಗಟ್ಟಲು ಒಂದು ಸಭೆಯ ನಾಯಕರು ಐದು ಹೆಜ್ಜೆಗಳನ್ನು ತೆಗೆದುಕೊಳ್ಳುವ ಅಗತ್ಯತೆಯಿರುತ್ತದೆ:

**ಭಕ್ತಿವೃದ್ಧಿಯನ್ನು ಒತ್ತಿಹೇಳುವುದು**

ಎಲ್ಲಕ್ಕಿಂತ ಹೆಚ್ಚಾಗಿ, ಸಭೆಯ ನಾಯಕರು ಸಭೆಯನ್ನು ಕಟ್ಟುವ ಮತ್ತು ಸಮಾಧಾನವನ್ನು ಬೆಳೆಸುವ ತತ್ವಗಳನ್ನು ಎಲ್ಲಾ ಸಮಯಗಳಲ್ಲಿ ಸಭೆಯು ಕಟ್ಟುವಂತೆ ನಿಶ್ಚಿತತೆ ಪಡಿಸಿಕೊಳ್ಳ ಬೇಕು (ರೋಮಾಪುರ 14:17, 19). ಪ್ರೀತಿಸುವಲ್ಲಿ, ಸಹಾಯ ಮಾಡುವದರಲ್ಲಿ, ಬೋಧಿ ಸುವದರಲ್ಲಿ, ಮತ್ತು ಪ್ರಾಣಗಳನ್ನು ರಕ್ಷಿಸುವದರಲ್ಲಿ ಆಸಕ್ತಿಯುಳ್ಳ ಸಭೆಗೆ ಮಹತ್ವವಿಲ್ಲದ ಸಂಗತಿಗಳ ಕಡೆಗೆ ವಿಚಾರಿಸಲು ಸಮಯವಾ ಗಲೀ ಆಸಕ್ತಿಯಾಗಲೀ ಇರುವದಿಲ್ಲ.

ಯಾವುದೇ ಸಭೆಗೆ ಭಿನ್ನಾಭಿಪ್ರಾಯಗಳು ಇರುವವು. ಹೆಚ್ಚಾಗಿ ಎಲ್ಲಾ ಸಭೆಗಳಲ್ಲಿ ಜನರು ಬೋಧಿಸಲ್ಪಟ್ಟದ್ದರಲ್ಲಿ ಪ್ರತಿಶತ 95ರಷ್ಟನ್ನು ಒಪ್ಪಿಕೊಳ್ಳುವರು. ಮನಸ್ಸಾಕ್ಷಿಯ ಯಾವುದೇ ಸಮಸ್ಯೆಯಿಲ್ಲದೇ ಅವರಲ್ಲಿ ಹೆಚ್ಚಾದವರು ಅತೀ ಹೆಚ್ಚಾದ ಚಟುವಟಿಕೆಗಳಲ್ಲಿ ಭಾಗವಹಿಸುವರು. ಒತ್ತು ಕೊಡುವಿಕೆಯ ಬಗ್ಗೆ ಸಮಸ್ಯೆಯು ಬರುತ್ತದೆ: ಒಪ್ಪಿಕೊಳ್ಳದಿರುವ ಕೆಲವು ಸಂಗತಿ ಗಳ ಮೇಲೆ ಇಲ್ಲವೇ ಒಪ್ಪಿಕೊಳ್ಳುವ ಅನೇಕ ಸಂಗತಿಗಳ ಮೇಲೆ ನಾವು ಒತ್ತುಕೊಡುತ್ತೇ ವೆಯೋ?

**ಸತ್ಯಕ್ಕೆ ಒಪ್ಪಿಸಿಕೊಳ್ಳಲ್ಪಟ್ಟವರಾಗಿರುವುದು**

ಸಭೆಯ ನಾಯಕರು ದೇವರ ವಾಕ್ಯದ ಸತ್ಯಕ್ಕೆ ಸಮರ್ಪಿಸಿಕೊಂಡವರಾಗಿರುವ ಅಗತ್ಯತೆಯಿದೆ. *"ಸ್ವಸ್ಥವಾದ ಬೋಧನೆಯು" ಮಹತ್ವದ್ದಾಗಿದೆ.* "ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರಿಕೆಯಾಗಿರಿ" ಎಂದು ಯೇಸು ಹೇಳಿದನು (ಮತ್ತಾಯ 7:15) ಮತ್ತು "ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು" (ಯೋಹಾನ 8:32) ಎಂದೂ ಹೇಳಿದನು. ದೇವರ ಇಡೀ ಉದ್ದೇಶದ ಮೇಲೆ ಪೌಲನು ಪ್ರಸಂಗಿಸಿದನು (ಅಪೊಸ್ತಲರ ಕೃತ್ಯಗಳು 20:27). ಗಲಾತ್ಯ 1:6-9ರಲ್ಲಿ, ದೇವರು ಒಂದು ಸುವಾರ್ತೆಯನ್ನು ಕೊಟ್ಟಿರುವನು; ಅದನ್ನು ಬಿಟ್ಟು ಬೇರೆಯಾವುದನ್ನಾದರೂ ಹಿಡಿದರೆ ಅದು ಸುವಾರ್ತೆಯನ್ನು ಕೆಡಿಸುವುದಾಗಿದೆ, ಮತ್ತು ಅದನ್ನು ಬೋಧಿಸುವವನು ಖಂಡಿಸಲ್ಪಟ್ಟಿದ್ದಾನೆ ಎಂಬುದನ್ನು ಪೌಲನು ಸ್ಪಷ್ಟಪಡಿಸಿದನು. "ದೇವ ಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯನ್ನು" ಕುರಿತು ಯೂದನು ಬರೆದನು (ಯೂದ 3). ತಿಮೊಥೆ ಮತ್ತು ತೀತನಿಗೆ ಬರೆದ ಪತ್ರಿಕೆಗಳು ವಾಕ್ಯವನ್ನು ಪ್ರಸಂಗಿಸಲು, ಸ್ವಸ್ಥಬೋಧನೆಯನ್ನು ಹಿಡಿದುಕೊಳ್ಳಲು ಮತ್ತು ಸುಳ್ಳು ಬೋಧಕರನ್ನು ತಪ್ಪಿಸಿಕೊಳ್ಳಲು ಹಾಗೂ ವಿರೋಧಿಸಲು ಅನೇಕ ಉಪದೇಶಗಳನ್ನು ಹೊಂದಿಕೊಂಡಿರುತ್ತವೆ (1 ತಿಮೊಥೆ 1:3-7; 4:1-6; 6:3-5; 2 ತಿಮೊಥೆ 4:1-5; ತೀತ 1:12-16; 2:1). 2 ಪೇತ್ರ 2:1-3, 1 ಯೋಹಾನ 4:1-3, ಮತ್ತು 2 ಯೋಹಾನ 7-11ರಲ್ಲಿ ಸುಳ್ಳು ಬೋಧಕರಿಗೆ ವಿರುದ್ಧ ವಾಗಿ ಎಚ್ಚರಿಕೆಗಳು ಕೊಡಲ್ಪಟ್ಟಿರುತ್ತವೆ. ತತ್ವವು ಏನನ್ನು ಮಾಡುವದಿಲ್ಲ ಎಂದು ಹೇಳುವ ಯಾರೇ ಆಗಲೀ, ಅವನು ಹೊಸ ಒಡಂಬಡಿಕೆಯನ್ನು ಓದಿರುವದಿಲ್ಲ ಇಲ್ಲವೇ ಅದನ್ನು

ನಂಬುವದಿಲ್ಲ!

ಶುದ್ಧವಾದ ತತ್ವವು ಮಹತ್ವದ್ದಾಗಿರುವದರಿಂದ, ಸಭೆಯ ನಾಯಕರು ಸತ್ಯವನ್ನು ಎತ್ತಿ ಹಿಡಿಯುವದರ ಬಗ್ಗೆ ನಿಶ್ಚಿತತೆಯುಳ್ಳವರಾಗಿರುವುದು ಅಗತ್ಯವಾಗಿದೆ. ತೀತ 1:9ರಲ್ಲಿ ಪೌಲನು, ಸಭಾಧ್ಯಕ್ಷನು, "ಸ್ವಸ್ಥ ಬೋಧನೆಯಿಂದ ಜನರನ್ನು ಎಚ್ಚರಿಸುವದಕ್ಕೂ ಎದುರಿಸುವವರ ಬಾಯಿ ಕಟ್ಟುವದಕ್ಕೂ ಶಕ್ತನಾಗಿರುವಂತೆ ಕ್ರಿಸ್ತ ಬೋಧಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದು ಕೊಂಡವನಾಗಿರಬೇಕು" ಎಂದು ಹೇಳಿದ್ದಾನೆ.

ಸುಳ್ಳು ಬೋಧಕರಿಂದಲೂ ಸುಳ್ಳು ಬೋಧನೆಯಿಂದಲೂ ಸಭೆಯನ್ನು ಕಾಪಾಡುವುದು ಹಿರಿಯರ ಪ್ರಾಮುಖ್ಯವಾದ ಕರ್ತವ್ಯವಾಗಿದೆ. (ನೋಡಿರಿ ಅಪೊಸ್ತಲರ ಕೃತ್ಯಗಳು 20:28-31.) ತೀತ 1:9-11ರ ಪ್ರಕಾರ ಈ ಕೆಲಸವು ನಾಲ್ಕು ಜವಾಬ್ದಾರಿಕೆಗಳನ್ನು ಹಿರಿಯರು ನೆರವೇರಿಸಬೇಕಾಗುತ್ತದೆ: (1) *ಸತ್ಯ ಮತ್ತು ತಪ್ಪಿನ ಮಧ್ಯದಲ್ಲಿ ಭಿನ್ನತೆಯನ್ನು ಅರಿತುಕೊಳ್ಳಲು ಸತ್ಯವನ್ನು ಸಕಾಷ್ಟಾಗಿ ತಿಳಿದುಕೊಳ್ಳುವುದು.* ಅವರು "ಬೋಧಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದುಕೊಂಡಿರಬೇಕು" (ವಚನ 9). (2) *ಸತ್ಯವನ್ನು ಬೋಧಿಸ ಬೇಕು ಮತ್ತು ಅವರು ಸೇವೆ ಮಾಡುತ್ತಿರುವ ಸಭೆಗಳಲ್ಲಿ ಸತ್ಯವು ಬೋಧಿಸಲ್ಪಡುವದನ್ನು ನೋಡಿ ಕೊಳ್ಳಬೇಕು:* ಹಿರಿಯರು "ಸತ್ಯಬೋಧನೆಯನ್ನು ಬೋಧಿಸುವವರಾಗಿರತಕ್ಕದ್ದು" (ವಚನ 9). (3) *ಸುಳ್ಳು ಬೋಧಕರನ್ನು ಮತ್ತು ಸುಳ್ಳು ಬೋಧನೆಯನ್ನು ಖಂಡಿಸತಕ್ಕದ್ದು.* ಹಿರಿಯರು ಸ್ವಸ್ಥ ಬೋಧನೆಯನ್ನು ವಿರೋಧಿಸುವವರನ್ನು ಖಂಡಿಸಲು ಶಕ್ತರಾಗಿರಬೇಕೆಂದು ವಚನ 9 ಹೇಳುತ್ತದೆ. (4) *ಮಂದೆಯನ್ನು ಸುಳ್ಳು ಬೋಧಕರಿಂದ ಮತ್ತು ಸುಳ್ಳು ಬೋಧನೆಗಳಿಂದ ಕಾಪಾಡತಕ್ಕದ್ದು.* ಯಾಕೆ ಎಂದು ಪೌಲನು 10 ಮತ್ತು 11ನೆಯ ವಚನಗಳಲ್ಲಿ ವಿವರಿಸಿದ್ದಾನೆ: "ಹಾಳು ಮಾಡುವ ಅನೇಕ ಜನರು ಇದ್ದಾರೆ ... ಅವರ ಬಾಯಿ ಮುಚ್ಚಿಸಬೇಕು. ..."

### ಸತ್ಯವನ್ನು ಬೋಧಿಸುವುದು

ಸ್ವಸ್ಥ ಬೋಧನೆಯು ಮಹತ್ವದ್ದಾಗಿರುವದರಿಂದ, ಸತತವಾಗಿ ಬೋಧಿಸುವದರ ದೊಡ್ಡ ಅಗತ್ಯತೆಯಿರುತ್ತದೆ. "ತತ್ವದ" ಪ್ರಸಂಗಗಳು ಎಂದಾದರೂ ಪ್ರಸಂಗಿಸದೇ ಹೋದರೆ, ಆಗ ಸಭೆಯು ಸುಳ್ಳು ಬೋಧಕರಿಂದ ಪ್ರಭಾವಿತವಾಗಬಹುದು. ನಾವು ಯಾವುದೇ ಸಮಯದಲ್ಲಿ ಧರ್ಮಭ್ರಷ್ಟತೆಯಿಂದ ಒಂದು ಸಂತತಿ ದೂರ ಇದ್ದೇವೆ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು!

### ಅಭಿಪ್ರಾಯದ ಕ್ಷೇತ್ರದಲ್ಲಿ ಸ್ವಾತಂತ್ರ್ಯಕ್ಕಾಗಿ ಅವಕಾಶ ಕೊಡುವುದು

ವಿಶ್ವಾಸದ ವಿಷಯಗಳ ಮತ್ತು ಅಭಿಪ್ರಾಯದ ವಿಷಯಗಳ ಮಧ್ಯದಲ್ಲಿ ವ್ಯತ್ಯಾಸ ಮಾಡುವುದು ಸಭಾ ನಾಯಕರಿಗಾಗಿ ಬಹಳ ಮಹತ್ವದ್ದಾಗಿರುತ್ತದೆ. ಅಭಿಪ್ರಾಯದ ವಿಷಯದಲ್ಲಿ ಸಭೆಯ ಸದಸ್ಯರು ನಂಬುವದಕ್ಕೆ ಸ್ವಾತಂತ್ರ್ಯವನ್ನು ಕೊಡುವದನ್ನು ಅವರು ನಿರ್ಧರಿಸಬೇಕು.

"ವಿಶ್ವಾಸದ ವಿಷಯಗಳು" ಮತ್ತು "ಅಭಿಪ್ರಾಯದ ವಿಷಯಗಳು" ಎಂಬುದರಿಂದ ನಾವೇನು ಅರ್ಥಮಾಡುತ್ತೇವೆ? ರಿಸ್ಟೋರೇಶನ್ ಮೂವ್ಮೆಂಟ್‌ದಲ್ಲಿ ಈ ಹೇಳಿಕೆಯಲ್ಲಿ ಭಿನ್ನತೆಯು ಗುರುತಿಸಲ್ಪಟ್ಟಿತು: "ನಂಬಿಕೆ, ಐಕ್ಯತೆಗಳ ವಿಷಯದಲ್ಲಿ; ಅಭಿಪ್ರಾಯ, ಸ್ವಾತಂತ್ರ್ಯದ ವಿಷಯದಲ್ಲಿ; ಎಲ್ಲಾ ಸಂಗತಿಗಳಲ್ಲಿ, [ಪ್ರೀತಿಯಲ್ಲಿ]." "ನಂಬಿಕೆಯ ವಿಷಯಗಳು" ಹೊಸ ಒಡಂಬಡಿಕೆಯ ಕ್ರೈಸ್ತತ್ವದ ಸಮಯಾತೀತ ಸಂಗತಿಗಳಿಗೆ ಸಂಬಂಧಿಸಿರುವವು, ಆ ಅತ್ಯವಶ್ಯಕ ವಿಷಯಗಳು ಸಮಯದೊಂದಿಗೆ ಬದಲಾಗುವದಿಲ್ಲ ಮತ್ತು ಹೊಸ ಒಡಂಬಡಿಕೆಯ ಸಭೆಯು ನೆಡಲ್ಪಡುವಾಗ ಬೋಧಿಸಲ್ಪಡತಕ್ಕದ್ದು. "ಅಭಿಪ್ರಾಯದ ವಿಷಯಗಳು" ಪ್ರಥಮ ಶತಮಾನದ ಕ್ರೈಸ್ತತ್ವದ ರೂಢಿಗೆ ಅತ್ಯಗತ್ಯವಾಗಿರಲಿಲ್ಲ.

ಹೊಸ ಒಡಂಬಡಿಕೆಯಲ್ಲಿ ಅತ್ಯಗತ್ಯತೆಗಳ ಮತ್ತು ಅತ್ಯಗತ್ಯತೆಯಲ್ಲದವುಗಳ ಮಧ್ಯದಲ್ಲಿ

ಹೇಗೆ ಭಿನ್ನವಾಗಿ ಹೇಳಬೇಕೆಂಬುದನ್ನು ನಿರೂಪಿಸುವದಕ್ಕೆ ಇದು ಸ್ಥಳವಾಗಿರುವದಿಲ್ಲ. ನಾವು ಸಾಮಾನ್ಯವಾಗಿ ವಿಷಯಗಳನ್ನು ಈ ಎರಡು ಭಾಗಗಳಲ್ಲಿ ವಿಭಾಗಿಸಿದ್ದೇವೆಂದು ಸುಮ್ಮನ್ನೆ ಒಪ್ಪಿಕೊಳ್ಳುತ್ತೇವೆ. ಉದಾಹರಣೆಯಾಗಿ ಪಾಪಗಳ ಪರಿಹಾರಕ್ಕಾಗಿ ಮುಳುಗೇಳಿ ಸುವದರಿಂದ ಬಾಪ್ತಿಸ್ಮ ಆರಾಧನೆಯಲ್ಲಿ ವಾದ್ಯಗಳಿಲ್ಲದೇ ಹಾಡುವುದು, ಕರ್ತನ ಭೋಜನ (ಕೇವಲ) ಪ್ರತಿ ವಾರದ ಮೊದಲನೆಯ ದಿನದಂದು ಇತ್ಯಾದಿ ಇಂಥ ವಿಷಯಗಳನ್ನು ವಿಶ್ವಾಸದ ವಿಷಯಗಳನ್ನಾಗಿ ಸಾಮಾನ್ಯವಾಗಿ ವರ್ಗೀಕರಿಸಿದ್ದೇವೆ. ಇನ್ನೊಂದೆಡೆಯಲ್ಲಿ, ಕರ್ತನ ದಿನದಂದು ಎಲ್ಲಿ ಮತ್ತು ಯಾವಾಗ ಸಭೆಯು ಕೂಡಿ ಬರುತ್ತದೆ, ಬಾಪ್ತಿಸ್ಮಗಳು ಎಲ್ಲಿ ಸಂಭವಿಸುತ್ತವೆ, ಕರ್ತನ ಭೋಜನದಲ್ಲಿ ದ್ರಾಕ್ಷಾರಸವನ್ನು ತೆಗೆದು ಕೊಳ್ಳುವಲ್ಲಿ ಒಂದು ತಪ್ಪಿನ ಇಲ್ಲವೇ ಅನೇಕವುಗಳ ಉಪಯೋಗ ಇತ್ಯಾದಿ ವಿಷಯಗಳನ್ನು ಕುರಿತ ಪ್ರಶ್ನೆಗಳನ್ನು ಅಭಿಪ್ರಾಯದ ವಿಷಯಗಳನ್ನಾಗಿ ವರ್ಗೀಕರಿಸಿದ್ದೇವೆ.

ಸಭೆಯ ನಾಯಕರು ಅಭಿಪ್ರಾಯದ ಕ್ಷೇತ್ರದಲ್ಲಿ ಒಂದು ನಿಶ್ಚಿತವಾದ ವಿಷಯವನ್ನು ಬಿಟ್ಟು ನಂಬಿಕೆಯ ವಿಷಯವನ್ನಾಗಿ ನಿರ್ಣಯಿಸುವಾಗ, ಅವರು ಅದನ್ನು ನಂಬಲಿಕ್ಕೆ ಸದಸ್ಯರಿಗೆ ಸ್ವಾತಂತ್ರ್ಯಕೊಡಬೇಕು, ಮತ್ತು ಬೇರೆ ಅಭಿಪ್ರಾಯಗಳಿಗಿರುವವರನ್ನು ಸಹಿಸಿಕೊಳ್ಳಲು ಎಲ್ಲಾ ಸದಸ್ಯರಿಗೆ ಬೋಧಿಸತಕ್ಕದ್ದು.

**ಸುಳ್ಳು ಬೋಧನೆಗಾಗಿ ಎಚ್ಚರಿಕೆಯಿಂದಿರುವುದು**

ಸಭೆಯ ನಾಯಕರು ತಾವು ನೋಡುವಲೆಲ್ಲಾ, ಸುಳ್ಳು ಬೋಧಕರನ್ನು ಮತ್ತು ಬೋಧನೆಗಳನ್ನು ನೋಡುತ್ತ, ಮಾಟಗಾರರನ್ನು ಬೇಟೆ ಮಾಡುವವರಾಗಿರಬಾರದು. ಇನ್ನೊಂದೆಡೆಯಲ್ಲಿ, ಅವರು ಸುಳ್ಳು ಬೋಧಕರಿಗಾಗಿ ಅವರು "ನೋಡುವವರಾಗಿರ ಬೇಕು" ಎಂದು ಬೈಬಲ್ ಕೇಳುತ್ತದೆ. ಅಪೊಸ್ತಲರ ಕೃತ್ಯಗಳು 20:28-31ರಲ್ಲಿ ಪೌಲನು ಹಿರಿಯರಿಗೆ ಈ ಎಚ್ಚರಿಕೆಯನ್ನು ಕೊಟ್ಟಿದ್ದಾನೆ:

> ... ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ. ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು. ಆದಕಾರಣ ನೀವು ... ಎಚ್ಚರವಾಗಿರಿ.

ಎಚ್ಚರಿಕೆಯ ಈ ಪರಿಸ್ಥಿತಿಯು ಹಿರಿಯರಿಗೆ ಅವರು ಸುಳ್ಳು ಮತ್ತು ಗಂಡಾಂತರಕಾರಿಯಾದ ಬೋಧನೆಗಳನ್ನು ಕೇಳುವಾಗ ಅವುಗಳನ್ನು ಗುರುತಿಸಲು ಶಕ್ತರಾಗಲಿಕ್ಕೆ ಅವಶ್ಯ ಕತೆಯುಳ್ಳದ್ದಾಗಿದೆ. ಇತರ ಸ್ಥಳಗಳಲ್ಲಿ ತತ್ವದ ಸಮಸ್ಯೆಗಳನ್ನು ಅರಿತು ಕೊಂಡಿರುವುದು ನಾಯಕರಿಗೆ ಅಗತ್ಯವಾಗಿದೆ. ಯಾವ ಸಭೆಯಲ್ಲಿ ಯಾರು ಏನನ್ನು ಬೋಧಿಸುತ್ತಿದ್ದಾರೆ ಎಂಬುದನ್ನು ನಿಶ್ಚಿತವಾಗಿ ತಿಳಿದಿರುವ ಅವಶ್ಯಕತೆಯಿದೆ.

ಸುಳ್ಳು ಬೋಧನೆಗೆ ಎಚ್ಚರಿಕೆಯಿಂದಿರುವುದು ಮತ್ತು ಅದು ಮೊದಲು ಸ್ಪಷ್ಟವಾಗಿ ಕಾಣಿಸಿಕೊಳ್ಳುವನ್ನು ಗುರುತಿಸುವುದು, ಅದು ಸಮಸ್ಯೆಯಾಗುವ ಮೊದಲು ಪ್ರಶ್ನೆಯೊಂದಿಗೆ ವ್ಯವಹರಿಸಲು, ಸಭೆಯ ನಾಯಕರಿಗೆ ಅವಕಾಶವನ್ನು ಒದಗಿಸುವುದು. ಪ್ರಿಸಿಲ್ ಮತ್ತು ಅಕ್ವಿಲ್‌ರಂತೆ ಅವರು ತಪ್ಪಾಗಿ ಬೋಧಿಸುವವನನ್ನು ಒಂದು ಬದಿಗೆ ತೆಗೆದು ಕೊಂಡು ಹೋಗಿ ಪ್ರತ್ಯೇಕವಾಗಿ ದೇವರ ಮಾರ್ಗವನ್ನು ಅವರಿಗೆ ಸ್ಪಷ್ಟವಾಗಿ ವಿವರಿಸಬಹುದು (ಅಪೊಸ್ತಲರ ಕೃತ್ಯಗಳು 18:26). ಆ ವಿಧಾನವು ಸೋತು ಹೋದರೆ, ಮೌನವಾಗಿ ಅವನ ಬೋಧನೆಯನ್ನು ನಿಲ್ಲಿಸಲು ಅವನ ಪ್ರಭಾವವನ್ನು ಮಿತಿಗೊಳಿಸಲು ಅವರು ಶಕ್ತರಾಗಿರಬೇಕು. ಅವರು ಏನನ್ನೇ ಮಾಡಲಿ, ಅವರು ಶಕ್ತರಾಗಿರಬೇಕು. ಅವರು ಏನನ್ನೇ ಮಾಡಲು ಅವರು "ಸರ್ಪಗಳಂತೆ

ಜಾಣರೂ, ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರತಕ್ಕದ್ದು" (ಮತ್ತಾಯ 10:16).

## ತತ್ವದ ಸಮಸ್ಯೆಗಳನ್ನು ಪರಿಹರಿಸುವುದು

ತಾತ್ವಿಕ ಭಿನ್ನಾಭಿಪ್ರಾಯಗಳು ಉತ್ಪಾದನೆಯಾಗುವವು. ಹೊಸ ಒಡಂಬಡಿಕೆಯ ಸಮಯದಲ್ಲಿ ಹಾಗಾಯಿತು. ನಿಜವಾಗಿಯೂ ಪತ್ರಿಕೆಗಳ ಪ್ರತಿಯೊಂದು ಪುಟವು ಆದಿ ಸಭೆಯದು ಪ್ರತಿಯೊಂದು ಸ್ಥಳಿಕ ಸಭೆಯಲ್ಲಿ ತಾತ್ವಿಕ ಸಮಸ್ಯೆಗಳಿದ್ದವೆಂಬುದಕ್ಕೆ ಸಾಕ್ಷಿಕೊಡುತ್ತದೆ. ಅದೇ ರೀತಿಯಲ್ಲಿ ತಾತ್ವಿಕ ಸಮಸ್ಯೆಗಳು ಬಹಳ ಹೆಚ್ಚಾಗಿ - ಅವುಗಳನ್ನು ತಡೆಗಟ್ಟಲು ಏನನ್ನು ಮಾಡಿದರೂ - ಇಂದು ಉದ್ಭವಿಸುತ್ತಲಿವೆ. ಇದರಲ್ಲಿ ಸ್ವಲ್ಪಮಟ್ಟಿಗೆ ಆದರಣೆಯು ಕಂಡು ಕೊಳ್ಳಲ್ಪಟ್ಟಿದೆ: ತತ್ವವು ಒಂದು ಸಭೆಗೆ ಯಾವುದೇ ಅರ್ಥವಾಗಿದ್ದರೆ, ಆಗ ಆ ಸ್ಥಳಿಕ ಸಭೆಯಲ್ಲಿಯ ಜನರು ಕೆಲವೊಂದು ಹಂತದಲ್ಲಿ ತತ್ವದ ಮೇಲೆ ಒಪ್ಪಿಕೊಳ್ಳದೇ ಹೋಗುತ್ತಾರೆ. ಅದಕ್ಕೆ ಯಾವಾಗ ಯಾವ ಅರ್ಥವಿರುವದಿಲ್ಲವೋ, ಆಗ ಯಾವುದೇ ತಾತ್ವಿಕ ಹೋರಾಟಗಳು ಇರುವದಿಲ್ಲ.

ತಾತ್ವಿಕ ಒಪ್ಪಂದವಿಲ್ಲದಿರುವಿಕೆಗಳು ಬಹುದೊಡ್ಡ ಹಾನಿಯನ್ನುಂಟು ಮಾಡಬಹುದು. ನಾಯಕರ ಅತ್ಯುತ್ತಮ ಪ್ರಯತ್ನಗಳು ಇದ್ದಾಗಲೂ, ಸಭೆಯ ಸದಸ್ಯರು ತತ್ವದ ಬಗ್ಗೆ ಒಪ್ಪಿಕೊಳ್ಳದಿರುವಾಗ, ಏನು ಮಾಡುವ ಅಗತ್ಯತೆಯಿದೆ ಎಂಬುದನ್ನು ನಾವು ತಿಳಿದಿರತಕ್ಕದ್ದು.

### ವಿಷಯವು ಎಷ್ಟು ಗಂಭೀರವಾಗಿದೆಯೆಂಬುದನ್ನು ತೀರ್ಮಾನಿಸುವುದು

ಸಹೋದರರು ಸಮ್ಮತಿಸದಿರುವ ವಿಷಯದ ಗಂಭೀರತೆಯ ಬಗ್ಗೆ ಹಿರಿಯರು ನಿರ್ಣಯಿಸತಕ್ಕದ್ದು. ಪ್ರಶ್ನೆಯು ನಂಬಿಕೆಯ ಕ್ಷೇತ್ರದಲ್ಲಿ ಒಳಗೊಂಡಿರುವುದೋ ಇಲ್ಲವೇ ಅಭಿಪ್ರಾಯದ ಕ್ಷೇತ್ರಕ್ಕೆ ಸಂಬಂಧಿಸಿದೆಯೋ ಎಂಬುದನ್ನು ಅವರು ಕೇಳಬೇಕಾಗಿದೆ. ಪ್ರಶ್ನೆಯು ಭಿನ್ನವಾದ ಕಡೆಗಳಲ್ಲಿರುವವರಿಗೆ ರಕ್ಷಣೆಯ ಬಗ್ಗೆ ಒಪ್ಪಿಗೆ ಇರುವುದೋ ಎಂಬುದರ ಬಗ್ಗೆಯೂ ಕೇಳಲ್ಪಡಬೇಕಾಗಿದೆ. ಉದಾಹರಣೆಯಾಗಿ, ಯೋಹಾನನ ಶಿಷ್ಯರು ಸಭೆಯು ಸ್ಥಾಪಿಸಲ್ಪಟ್ಟ ನಂತರ ಪುನಃ ಬಾಪ್ತಿಸ್ಮ ಹೊಂದಿದರೆಂದು ನಂಬುತ್ತಾರೆ; ಇತರರು ಸಭೆಯು ಸ್ಥಾಪಿಸಲ್ಪಡವುದಕ್ಕಿಂತ ಮೊದಲು ಯೋಹಾನನಿಂದ ಬಾಪ್ತಿಸ್ಮ ಹೊಂದಿದವರು ಪುನಃ ಬಾಪ್ತಿಸ್ಮ ಹೊಂದುವ ಅತಗ್ಯತೆಯಿರಲಿಲ್ಲ ಎಂದು ನಂಬುತ್ತಾರೆ. ಇದು ವಿಷಯದ ಎರಡೂ ಕಡೆಯಲ್ಲಿರುವ ನಂಬಿಗಸ್ತ ಸಹೋದರರ ಮತ್ತು ಸಹೋದರಿಯರ ನಂಬಿಕೆಯೊಂದಿಗೆ ಪ್ರಶ್ನೆಯಾಗಿದೆ. ಹೀಗಿದ್ದರೂ ಎರಡೂ ಕಡೆಗಳಲ್ಲಿರುವವರು ಇದನ್ನು ಒಪ್ಪಿಕೊಳ್ಳುತ್ತಾರೆ: ಸರಿಯಾಗಿದ್ದವರು ಯಾರೇ ಇರಬಹುದು, ವಿಷಯವು ಇಂದು ಯಾರಾದರೊಬ್ಬರ ರಕ್ಷಣೆಯ ಬಗ್ಗೆ ಪರಿಣಾಮ ಮಾಡಲಾರದು, ಇಲ್ಲವೆ ಆಧುನಿಕ ಮನುಷ್ಯನಿಗೆ ಬಾಪ್ತಿಸ್ಮದ ಅವಶ್ಯಕತೆಯನ್ನು ಅಲ್ಲಗಳೆಯುವದಿಲ್ಲ. ಇತರ ಭಿನ್ನತೆಗಳು ಒಂದೇಯಾಗಿರುತ್ತವೆ: ಯಾರಾದರೂ ಸರಿಯಾಗಿದ್ದರೂ ಸಹ, ಅದರ ಬಗ್ಗೆ ಚಿಂತಿಸಬೇಕಾದ ಅವಶ್ಯಕತೆಯಿರುವದಿಲ್ಲ. ಯಾಕೆಂದರೆ ಒಬ್ಬನು ತನ್ನ ಪ್ರಾಣವನ್ನು ಕಳೆದು ಕೊಳ್ಳುವದರಲ್ಲಿ ಪರಿಣಾಮಗೊಳ್ಳುವದಿಲ್ಲ, ವಿಷಯದ "ಗಂಭೀರತೆಯು" ಪ್ರಶ್ನೆಯು, "ಈ ತತ್ವದ ಬೋಧನೆ ಮತ್ತು ರೂಢಿಯು ಜನರು ತಪ್ಪಿ ಹೋಗಲಿಕ್ಕೆ ಕಾರಣವಾಗಬಹುದೋ?" ಎಂಬುದು.

### ಪರಿಸ್ಥಿತಿಗನುಗುಣವಾಗಿ ವರ್ತಿಸುವುದು

ನಾಯಕರು ವಿಷಯದ ಗಂಭೀರತೆಯನ್ನು ಪೃಥಕ್ಕರಿಸಿದ ನಂತರ ಅವರು ಪರಿಸ್ಥಿತಿಗನುಗುಣವಾಗಿ ಯೋಗ್ಯವಾಗಿ ವರ್ತಿಸತಕ್ಕದ್ದು. ಒಪ್ಪಂದವಿಲ್ಲದಿರುವಿಕೆಯು ವಿಶ್ವಾಸದ ಕ್ಷೇತ್ರದಲ್ಲಿರುವುದೋ ಇಲ್ಲವೇ ಅಭಿಪ್ರಾಯದ ಕ್ಷೇತ್ರದಲ್ಲಿರುವುದೋ ಎಂಬುದರ

ಮೇಲೆ ಅವಲಂಭಿಸಿ ಕಾರ್ಯಕೈಕೊಳ್ಳುವ ಅಗತ್ಯತೆ ಇರುತ್ತದೆ.

*ನಂಬಿಕೆ ಮತ್ತು ಅಭಿಪ್ರಾಯದ ಮಧ್ಯದಲ್ಲಿ ಭಿನ್ನತೆಗಳು ಮಾಡಲ್ಪಡತಕ್ಕದ್ದು.* ಮೊದಲನೆಯ ಶತಮಾನದಲ್ಲಿಯ ಸಭೆಗಳು ಅಂಥ ಭಿನ್ನತೆಗಳನ್ನು ಮಾಡುವ ಅವಶ್ಯಕತೆಗಳಲ್ಲಿದ್ದವು. ಅನ್ಯರು ಕ್ರೈಸ್ತರಾಗಲು ಸುನ್ನತಿ ಪಡೆದು ಕೊಳ್ಳಬೇಕೆಂದು ಕೆಲವರು ಬೋಧಿಸಿದಾಗ, ಸಾಕಷ್ಟು ಚರ್ಚೆಯ ನಂತರ, ಯೆರೂಸಲೇಮಿನಲ್ಲಿಯ ನಾಯಕರು ವಿಷಯಕ್ಕೆ ವಿರುದ್ಧವಾಗಿ, ಸಭೆಯ ಒಪ್ಪಿಗೆಯಿಂದ ತೀರ್ಮಾನಿಸಿದರು (ಅಪೊಸ್ತಲರ ಕೃತ್ಯಗಳು 15:10, 11, 19). ಸುನ್ನತಿಯ ವಿಚಾರವು ರಕ್ಷಣೆಯ ಮೇಲೆ ಪರಿಣಾಮ ಮಾಡಿತು; ಅದು ವಿರೋಧಿಸಲ್ಪಡತಕ್ಕದ್ದು - ಅದು ನಂಬಿಕೆಯ ವಿಷಯವಾಗಿತ್ತು. ಇದು ಪೌಲನ ಸ್ಥಾನವಾಗಿತ್ತು. ವಿಶೇಷವಾಗಿ ಗಲಿಲಾಯದಲ್ಲಿ ಮುಂದಿಡಲ್ಪಟ್ಟಿತ್ತು. ಅಲ್ಲಿ ಪೌಲನು ಸುನ್ನತಿಯು ರಕ್ಷಣೆಗೆ ಅಗತ್ಯವಾಗಿಲ್ಲವೆಂದು ಒತ್ತಿ ಹೇಳಿದನು (ಗಲಾತ್ಯ 2:3-5; 5:1-6).

*ಭಿನ್ನಾಭಿಪ್ರಾಯಗಳು ಅಭಿಪ್ರಾಯದ ಕ್ಷೇತ್ರದಲ್ಲಿರಬಹುದು.* ಕೆಲವು ಸಲ ಸ್ಥಳಿಕ ಸಭೆಯಲ್ಲಿಯ ವೈಯಕ್ತಿಕ ವ್ಯಕ್ತಿಗಳು ಅಭಿಪ್ರಾಯದ ವಿಷಯಗಳ ಬಗ್ಗೆ ಒಪ್ಪಿಕೊಳ್ಳುವದಿಲ್ಲ. ಇವೆಲ್ಲವೋ ಅವುಗಳ ಭಿನ್ನಾಭಿಪ್ರಾಯವು ಅತ್ಯಾವಶ್ಯಕವಲ್ಲದ ಸಂಗತಿಗಳ ಬಗ್ಗೆ ಒಪ್ಪಿಕೊಳ್ಳುವದಿಲ್ಲ. ಮೂಲ ತತ್ವಗಳ ಮೇಲೆ (ರಕ್ಷಣೆಯ ಮಾರ್ಗ, ಸಭೆಯ ಆರಾಧನೆ ಇತ್ಯಾದಿ.) ಒಪ್ಪಿಕೊಳ್ಳುವವರ ಮಧ್ಯದಲ್ಲಿ ಯಾವವು ಅಭಿಪ್ರಾಯಗಳಾಗಿವೆ ಮತ್ತು ಯಾವ ಸಂಗತಿಗಳು ನಂಬಿಕೆಯವುಗಳಾಗಿವೆ ಎಂಬ ಭಿನ್ನತೆ ಬರುವಾಗ ಏನು ಮಾಡಬೇಕಾಗುವುದು? ಉದಾಹರಣೆಯಾಗಿ, ಕೆಲವರು ಕರ್ತನ ಭೋಜನದಲ್ಲಿ ಒಂದೇ ಪಾತ್ರೆಯು ಉಪಯೋಗಿ ಸಲ್ಪಡಬೇಕು ಎಂದು ಹೇಳುತ್ತಾರೆ; ಇತರರು ಪಾತ್ರೆಗಳ ಸಂಖ್ಯೆಯು ಅಭಿಪ್ರಾಯದ ವಿಷಯವಾಗಿದೆ ಎಂದು ನಂಬುತ್ತಾರೆ.

ಅಂಥ ಭಿನ್ನತೆಗಳು ಅಸ್ತಿತ್ವದಲ್ಲಿರುವಾಗ ಏನು ಮಾಡತಕ್ಕದ್ದು? ಅತ್ಯವಶ್ಯಕವಲ್ಲದವುಗಳ ಮೇಲೆ ಸಹೋದರರು ಒಪ್ಪಿ ಕೊಳ್ಳದಿರುವಾಗ ಸಭೆಯ ನಾಯಕರು ಹೇಗೆ ಯೋಗ್ಯವಾಗಿ ನಡೆದು ಕೊಳ್ಳಬೇಕು? ಆ ಪ್ರಶ್ನೆಗೆ ರೋಮಾಪುರ 14 ಪ್ರೇರೇಪಿತ ಉತ್ತರವನ್ನು ಕೊಡುತ್ತದೆ. ರೋಮಿನಲ್ಲಿ ಸಭೆಯಲ್ಲಿ ಎರಡು ಗುಂಪುಗಳಿದ್ದವು. ಪೌಲನು ಒಂದನ್ನು "ಬಲಹೀನರು" (ರೋಮಾಪುರ 14:1, 2) ಎಂದು ಮತ್ತು ಒಂದನ್ನು "ಬಲವುಳ್ಳವರು" ಎಂದು ಕರೆದನು (ರೋಮಾಪುರ 15:1). "ಬಲಹೀನರ" ಗುಂಪು ಮಾಂಸ ತಿನ್ನುವದರಲ್ಲಿ ಮತ್ತು ಕೆಲವೊಂದು ದಿನಗಳನ್ನು ಆಚರಿಸುವದರಲ್ಲಿ ಕೆಲವೊಂದು ಮಿತಿಗಳನ್ನು ಸ್ವೀಕರಿಸಿತ್ತು (ರೋಮಾಪುರ 14:2, 5, 21), ಅದನ್ನು "ಬಲವುಳ್ಳವರ" ಗುಂಪು ತಿರಸ್ಕರಿಸಿತು. "ಬಲಹೀನರು" ಭಿನ್ನತೆಯು ನಂಬಿಕೆಯ ವಿಷಯವಾಗಿದೆ ಎಂದು ತಿಳಿದರು; "ಬಲವುಳ್ಳವರು" ಅದನ್ನು ಸ್ವಾತಂತ್ರ್ಯವೆಂದು ತಿಳಿದರು. ಈ ಉದಾಹರಣೆಯಲ್ಲಿ "ಬಲವುಳ್ಳವರು" ಗುಂಪು ಅದರ ತಿಳುವಳಿಕೆಯಲ್ಲಿ ಸರಿಯಾಗಿ ಇತ್ತು: "ಯಾವುದೂ [ಯಾವ ಆಹಾರವೂ] ಅದರಲ್ಲಿ ತಾನೇ ಅಶುದ್ಧವಾದದ್ದಾಗಿರುವದಿಲ್ಲ" (ರೋಮಾಪುರ 14:14; ನೋಡಿರಿ ವಚನ 20).

ಹೀಗಿದ್ದರೂ, ಪೌಲನು, ಈ ಸಹೋದರರು - ಎರಡೂ ಗುಂಪುಗಳು - ಒಂದಾಗಿ ಜೀವಿಸುವ ಅಗತ್ಯತೆ ಇದೆಯೆಂದು ಹೇಳಿದನು. ನಿರ್ದಿಷ್ಟವಾಗಿ, ಅವರು ಈ ಕೆಳಗಿನವುಗಳನ್ನು ಕಲಿತುಕೊಳ್ಳುವ ಅಗತ್ಯತೆ ಇರುತ್ತದೆ:[1]

(1) *ಪರಸ್ಪರ ಸ್ವೀಕಾರ.* ಪ್ರತಿಯೊಂದು ಗುಂಪು ಇನ್ನೊಂದು ಗುಂಪನ್ನು ಸ್ವೀಕರಿಸುವ ಅಗತ್ಯತೆಯಿತ್ತು. "ಬಲವುಳ್ಳವರು" "ಬಲಹೀನರನ್ನು" ಅವರನ್ನು ದ್ವೇಷಿಸದೇ ಸ್ವೀಕರಿಸಬೇಕಾಗಿತ್ತು: "ತಿನ್ನುವವನು ತಿನ್ನದವನನ್ನು ಹೀನೈಸಬಾರದು" "ಬಲಹೀನರು" "ತಿನ್ನುವವನನ್ನು ದೋಷಿಯೆಂದು ಎಣಿಸಬಾರದು." "ತಿನ್ನದವನು ತಿನ್ನುವವನನ್ನು ದೋಷಿಯೆಂದು ಎಣಿಸಬಾರದು: ದೇವರು ಇಬ್ಬರನ್ನೂ ಸೇರಿಸಿ ಕೊಂಡಿದ್ದಾನಲ್ಲಾ" (ರೋಮಾಪುರ 14:3; ನೋಡಿರಿ. ವಚನ 10).

(2) *ವೈಯಕ್ತಿಕ ಸಹನೆ.* ತಮ್ಮ ಸಹೋದರರ ನಿಮಿತ್ತವಾಗಿ "ಬಲವುಳ್ಳವರು" ತಮ್ಮ

ಸ್ವಾತಂತ್ರ್ಯವನ್ನು ಬಿಟ್ಟು ಕೊಡಬೇಕೆಂದು ಹೇಳಲ್ಪಟ್ಟಿದ್ದಾರೆ: ಒಬ್ಬ ಸಹೋದರನ ದಾರಿಯಲ್ಲಿ ಆತಂಕಗಳನ್ನು, ಎಡಹುವ ಕಲ್ಲುಗಳನ್ನು ಹಾಕಬಾರದೆಂದು ಹೇಳಲ್ಪಟ್ಟಿದ್ದಾರೆ (ರೋಮಾಪುರ 14:13; ಇವುಗಳನ್ನು ನೋಡಿರಿ ವಚನಗಳು 15, 20, 21). ಒಬ್ಬ ಸಹೋದರನಿಗೆ ಆತಂಕವನ್ನೊಡ್ಡುವುದು ಅವನು ಗಲಿಬಿಲಿಗೊಳ್ಳುವಂತೆ ಮಾಡುವದಾಗಿರುವದಿಲ್ಲ; ಅದು ಅವನು ಪಾಪ ಮಾಡಲಿಕ್ಕೆ ಮತ್ತು ತನ್ನ ಪ್ರಾಣವನ್ನು ಕಷ್ಟಕ್ಕೆ ಗುರಿಪಡಿಸಿಕೊಳ್ಳಲಿಕ್ಕೆ ಕಾರಣವಾಗಬಹುದು.

ಈ ವಿಷಯದಲ್ಲಿ "ಬಲಶಾಲಿಗಳು" ಸರಿಯಾಗಿದ್ದಾರೆ. ಹಾಗಿದ್ದರೂ "ಸರಿಯಾಗಿದ್ದವರು" ಈ ಭಿನ್ನಾಭಿಪ್ರಾಯದಲ್ಲಿ ತಪ್ಪಾದವರಿಗೆ ಬಿಟ್ಟು ಕೊಡಬೇಕೆಂದು ಹೇಳಲ್ಪಟ್ಟಿದ್ದಾರೆ. ಯಾಕೆ? ಬಹುಶಃ ಅವರು "ಬಲವುಳ್ಳವರು" ಆಗಿದ್ದುದರಿಂದ ಆಗಿರಬೇಕು. ಕ್ರೈಸ್ತ ಧರ್ಮದ ಸ್ವಯಂ-ತ್ಯಾಗದ ಮಹತ್ವವನ್ನು ಅವರು ಚೆನ್ನಾಗಿ ತಿಳಿದು ಕೊಳ್ಳಬೇಕು; "ದೃಢವಾದ ನಂಬಿಕೆಯುಳ್ಳ ನಾವು ನಮ್ಮ ಸುಖವನ್ನು ನೋಡಿಕೊಳ್ಳದೆ ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳಬೇಕು. ನಮ್ಮಲ್ಲಿ ಪ್ರತಿಯೊಬ್ಬನು ತನ್ನ ನೆರೆಯವನ ಹಿತವನ್ನು ಭಕ್ತಿವೃದ್ಧಿಯನ್ನು ಅಪೇಕ್ಷಿಸುವವನಾಗಿ ಅವನ ಸುಖವನ್ನು ನೋಡಿಕೊಳ್ಳಲಿ. ಯಾಕಂದರೆ ಕ್ರಿಸ್ತನು ಸಹ ತನ್ನ ಸುಖವನ್ನು ನೋಡಿಕೊಳ್ಳಲಿಲ್ಲ; ..." (ರೋಮಾಪುರ 15:1-3). ಈ ಮನೋಭಾವನೆಯು ಕ್ರೈಸ್ತರಲ್ಲಿದ್ದರೆ ಕೂಡಲೇ ಎಷ್ಟು ತತ್ವದ ಭಿನ್ನತೆಗಳು ಬಗೆಹರಿಸಲ್ಪಡುವದಿಲ್ಲವೇ!

(3) *ಪರಸ್ಪರ ಭಕ್ತಿವೃದ್ಧಿ.* ಸಭೆಯು, "ದೇವರ ರಾಜ್ಯವು ಉಣ್ಣುವುದು, ಕುಡಿಯುವುದಲ್ಲ, ಆದರೆ ಪರಿಶುದ್ಧಾತ್ಮನಲ್ಲಿ ನೀತಿ - ಮತ್ತು ಸಮಾಧಾನ ಹಾಗೂ ಆನಂದ" ಎಂಬುದನ್ನು ಗುರುತಿಸತಕ್ಕದ್ದು. ಪ್ರತಿಯೊಬ್ಬ ಕ್ರೈಸ್ತನು, "ಸಮಾಧಾನಕ್ಕೂ ಪರಸ್ಪರ ಭಕ್ತಿವೃದ್ಧಿಗೂ ಅನುಕೂಲವಾಗಿರುವವುಗಳನ್ನು ಸಾಧಿಸಿಕೊಳ್ಳತಕ್ಕದ್ದು" (ರೋಮಾಪುರ 14:17, 19).

(4) *ಆಂತರಿಕ ಅನುಸರಣೆ.* ಪ್ರತಿಯೊಬ್ಬ ಸದಸ್ಯನು ದೇವರ ಚಿತ್ತದ ತನ್ನ ಸ್ವಂತ ತಿಳುವಳಿಕೆಯೊಂದಿಗೆ ಜಾಗರೂಕತೆಯಿಂದ ಹೊಂದಿಕೊಂಡಿರಬೇಕು: "ಸಂಶಯಪಟ್ಟು ಉಣ್ಣುವವನು ಸಂಶಯದಿಂದ ಉಣ್ಣುವ ಕಾರಣ ದೋಷಿಯಾಗಿದ್ದಾನೆ, ಯಾವುದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ" (ರೋಮಾಪುರ 14:23). ಆದುದರಿಂದ, ಒಬ್ಬನು ತನ್ನ ಸ್ವಂತ ಮನಸ್ಸಾಕ್ಷಿಗೆ ವಿರುದ್ಧವಾಗಿ ಹೋದರೆ, ಅವನು ಮಾಡುವುದು ಸರಿಯಾಗಿದ್ದರೂ, ಅವನು ಪಾಪ ಮಾಡುತ್ತಾನೆ.

ತತ್ವದ ಭಿನ್ನಾಭಿಪ್ರಾಯಗಳು ಸ್ಥಳಿಕ ಸಭೆಯಲ್ಲಿ ಅಭಿಪ್ರಾಯಕ್ಕೆ ಸಂಬಂಧಿಸಿದ್ದರೆ, ರೋಮಾಪುರ 14ರ ವಿಧಾನವು ಅನುಸರಿಸಲ್ಪಡಬೇಕು.

*ಭಿನ್ನಾಭಿಪ್ರಾಯಗಳು ವಿಶ್ವಾಸದ ಕ್ಷೇತ್ರದಲ್ಲಿ ಇರಬಹುದು.* ಸಭೆಯ ನಾಯಕರು ತತ್ವದ ವಿಷಯವು ವಿಶ್ವಾಸದ ಕ್ಷೇತ್ರದಲ್ಲಿ ಇರುವುದೆಂದು ನಿರ್ಣಯಿಸಿದರೆ - ಅದು ಜನರು ತಪ್ಪಿಹೋಗುವದಕ್ಕೆ ಕಾರಣವಾಗುವದಾಗಿದ್ದರೆ - ಅವರು ಏನು ಮಾಡಬಲ್ಲರು?

ಮೊದಲನೆಯದು, ತಪ್ಪು ಬೋಧನೆ ಬೋಧಿಸುತ್ತಿರುವವನನ್ನು ಹಿರಿಯರು ಸರಿಪಡಿಸಬೇಕು. ಅವರು ಅದನ್ನು ಪ್ರೀತಿಯ ಮಾರ್ಗದಲ್ಲಿ ಮಾಡಬೇಕಾಗಿರುವುದು. ಸುಳ್ಳು ಬೋಧಕರೊಂದಿಗೆ ವ್ಯವಹರಿಸುವಾಗಲೂ ಕ್ರೈಸ್ತರು ಅಪಹಾಸ್ಯಮಾಡುವದನ್ನು, ವೈಯಕ್ತಿಕವಾಗಿ ದಾಳಿ ಮಾಡುವದನ್ನು ಇಲ್ಲವೇ ಕೀಳು ಮಟ್ಟವನ್ನು ಉಪಯೋಗಿಸುವ ಅಗತ್ಯತೆಯಿರುವದಿಲ್ಲ. ಎಫೆಸ 4:15ರ ಪ್ರಕಾರ, ಕ್ರೈಸ್ತರು ಸತ್ಯವನ್ನು "ಪ್ರೀತಿಯಲ್ಲಿ" ಮಾತಾಡಬೇಕು. 2 ತಿಮೊಥೆ 2:23-26 ನಾಲ್ಕು ತತ್ವಗಳನ್ನು ಕುರಿತು ಮಾತಾಡುತ್ತದೆ: (1) ಸಭೆಯ ನಾಯಕರು ಚರ್ಚೆಯಲ್ಲಿ ಪ್ರಾಮುಖ್ಯತೆ ಪಡೆಯಬೇಕಾಗಿಲ್ಲ; ಯಾಕಂದರೆ ಕೆಲವು ಸಂಗತಿಗಳ ಬಗ್ಗೆ ಚರ್ಚಿಸುವುದು ಬೆಲೆಯುಳ್ಳದ್ದಾಗಿರುವದಿಲ್ಲ. (2) ಕೆಲವು ಸಲ ಸತ್ಯಕ್ಕಾಗಿ ನಿಲ್ಲುವವರಿಗೆ ತಮ್ಮ ವಿರೋಧಿಗಳನ್ನು ಸರಿಪಡಿಸುವ ಅಗತ್ಯತೆಯಿರುತ್ತದೆ. (3) ಈ ಸರಿಪಡಿಸುವಿಕೆಯು "ದೀನತೆಯಿಂದ" ಮಾಡಲ್ಪಡತಕ್ಕದ್ದು. (4) ಸರಿಪಡಿಸುವಿಕೆಯ ಉದ್ದೇಶವು ಚರ್ಚೆಗಳಲ್ಲಿ ಗೆದ್ದುಕೊಳ್ಳುವದಲ್ಲಿ,

ಇನ್ನೊಬ್ಬನನ್ನು ಕೆಳಗೆ ಹಾಕುವದಿಲ್ಲ, ಇಲ್ಲವೇ ತನನ್ನು ಕಟ್ಟಿಕೊಳ್ಳುವದಕ್ಕಲ್ಲ, ಆದರೆ ಸರಿಪಡಿಸಲ್ಪಟ್ಟವನ ಪ್ರಾಣವನ್ನು ರಕ್ಷಿಸುವದಕ್ಕಾಗಿದೆ.

ಎರಡನೆಯದು, ಅವರು, ಸಾಧ್ಯವಾದ ಮಟ್ಟಿಗೆ, ತಪ್ಪನ್ನು ತ್ಯಜಿಸುವವರೆಗೆ ಸುಳ್ಳು ಬೋಧಕನು ತನ್ನ ಸಂದೇಶವನ್ನು ಹೇಳದಂತೆ ತಡೆಹಿಡಿಯುವುದು.

ಮೂರನೆಯದು, ಅವರ ಜವಾಬ್ದಾರಿಕೆಯು ಮಾಡಲ್ಪಡುತ್ತಿರುವಂಥ ಮತ್ತು ಮಾಡಿದಂಥ ಬೋಧನೆಯನ್ನು ವಿರೋಧಿಸುವುದು, ಹೇಳಲ್ಪಟ್ಟಂಥ ಸುಳ್ಳು ವಿಚಾರಗಳನ್ನು ಸರಿಪಡಿಸುವುದು ಆಗಿರುತ್ತದೆ.

ನಾಲ್ಕನೆಯದು, ಸುಳ್ಳು ಬೋಧಕನು ಬಹಿರಂಗವಾಗಿ ಪಾಪಮಾಡಿದ್ದಾನೆಂದು ನಿರ್ಣಯಿಸಿದರೆ ಮತ್ತು ಅವನು ಮಾನಸಾಂತರ ಪಡುವದನ್ನು ನಿರಾಕರಿಸಿದರೆ ಆದರೆ ಸಭೆಯ ಭಾಗವಾಗಿ ಉಳಿದುಕೊಂಡರೆ, ಅವರು ಶಿಕ್ಷಿಸುವ ವಿಧಾನಗಳನ್ನು ಪ್ರಾರಂಭಿಸಬೇಕು. ಅವನು ಮಾನಸಾಂತರ ಪಡದೇ ಉಳಿದು ಕೊಂಡರೆ, ಈ ಶಿಕ್ಷೆ ಕೊಡುವುದು ಅವನನ್ನು ಅನ್ಯೋನ್ಯತೆಯಿಂದ ಹೊರಗೆ ಹಾಕುವದಕ್ಕೆ ನಡಿಸುವುದು, ಹೀಗಿದ್ದರೂ, ನಾಯಕರು ಈ ಹೆಜ್ಜೆಯನ್ನು ತೆಗೆದುಕೊಳ್ಳಲು ನಿರ್ಣಯಿಸಿದರೆ, ಅವರು ಶಿಕ್ಷೆಯನ್ನು ತೆಗೆದುಕೊಳ್ಳಲು ನಿರ್ಣಯಿಸಿದರೆ, ಅವರು ಶಿಕ್ಷೆಯು ಸಭೆಯ ನಾಯಕರು "ತಪ್ಪು ಮಾಡಿದವನನ್ನು ಸಭೆಯಿಂದ ಹೊರಗೆ ಹಾಕುವದನ್ನು ಒಳಗೊಂಡಿರಬಾರದು." ಸಭೆಯ ಶಿಕ್ಷೆಯು ಸಭೆಯ ನಾಯಕರಿಂದ ಅಲ್ಲ, ಆದರೆ ಸಭೆಯಿಂದ ಮಾಡಲ್ಪಡುತ್ತದೆ. ಸಭೆಯು ಶಿಕ್ಷೆಗೊಳಪಡಿಸುವವನನ್ನು ಒಬ್ಬ ವೈರಿಯಂತೆ ನಡಿಸಿಕೊಳ್ಳಬಾರದು ಆದರೆ ಒಬ್ಬ ಸಹೋದರನಂತೆ ಬುದ್ಧಿವಾದ ಹೇಳಲ್ಪಡಬೇಕೆಂಬುದನ್ನು ಜ್ಞಾಪಕದಲ್ಲಿ ಇಟ್ಟು ಕೊಳ್ಳತಕ್ಕದ್ದು (2 ಥೆಸಲೊನೀಕ 3:15). ಒಬ್ಬನು ಸಭೆಯ ಹಿರಿಯನೊಂದಿಗೆ ಇಲ್ಲವೇ ಪ್ರಸಂಗಿಯೊಂದಿಗೆ ಒಪ್ಪಿಕೊಳ್ಳದಿರುವದರಿಂದ ಅವನು ಶಿಕ್ಷಿಸಲ್ಪಡುವದಿಲ್ಲ; ಪ್ರಶ್ನೆಯು ಸ್ಥಳಿಕ ನಾಯಕನೊಂದಿಗೆ ಅವನು ಒಪ್ಪಿಕೊಳ್ಳುವನೋ ಇಲ್ಲವೋ ಎಂಬುದಲ್ಲ, ಆದರೆ ಅವನ ಬೋಧನೆಯು ಬೈಬಲಿನೊಂದಿಗೆ ಒಪ್ಪಿಕೊಳ್ಳುತ್ತದೋ ಇಲ್ಲವೋ ಎಂಬುದಾಗಿರುತ್ತದೆ. ನಾಯಕರು ಶಿಕ್ಷೆಯು ಬೈಬಲಿಗನುಸಾರವಾಗಿ ಹಾಗೂ ಪ್ರೀತಿಯ ಮಾರ್ಗದಲ್ಲಿ ಕೈಕೊಳ್ಳಲ್ಪಡುವಂತೆ ನೋಡಿಕೊಳ್ಳತಕ್ಕದ್ದು.

ಹೀಗಿದ್ದರೂ, ಅತೀ ಮಹತ್ವದ ಅಗತ್ಯತೆಯು, ಸಮಸ್ಯೆಯು ಅಗತ್ಯ ಸಂಗತಿಗಳಿಗೆ ಸಂಬಂಧಿಸಿದ್ದರೆ, ಸಭೆಯ ನಾಯಕರು ಏನಾದರಾಗಲಿ, ಸತ್ಯಕ್ಕಾಗಿ ನಿಂತು ಕೊಳ್ಳತಕ್ಕದ್ದು.

## ಮುಕ್ತಾಯ

ಹಿರಿಯರ ಅತ್ಯುತ್ತಮ ಪ್ರಯತ್ನಗಳಿದ್ದರೂ, ಸಭೆಯು ಇಡೀಯಾಗಿ "ಭಕ್ತರಿಗೆ ಒಮ್ಮೆ ವಹಿಸಿಕೊಡಲ್ಪಟ್ಟ ನಂಬಿಕೆಯಿಂದ" (ಯೂದ 3) ಬೆನ್ನು ಹಾಕಿ ಹೋಗಬಹುದು. ಆಗ ಹಿರಿಯರು ಏನು ಮಾಡ ಬೇಕು? ಎಲ್ಲಾ ಪರಿಸ್ಥಿತಿಗಳನ್ನು ಒಂದೇ ಪರಿಹಾರವು ಹೊಂದಿಕೊಳ್ಳಲಾರದು. ಅವರು ಏನನ್ನೇ ಮಾಡಿದರೂ ಅವರು ಬುದ್ಧಿವಂತಿಕೆಯಿಂದ ವರ್ತಿಸತಕ್ಕದ್ದು. ಅದೇ ಸಮಯದಲ್ಲಿ ಪರಿಶುದ್ಧ ಬರಹಕ್ಕೆ ಯೋಗ್ಯವಲ್ಲದ್ದನ್ನು, ಅಕ್ರಮವಾದದ್ದನ್ನು ಮತ್ತು ಅನೈತಿಕವಾದದ್ದನ್ನು ಮಾಡಲು ತೀರ್ಮಾನಿಸಬಾರದು. ಎಲ್ಲಕ್ಕಿಂತ ಹೆಚ್ಚಾಗಿ ಸುಳ್ಳು ಬೋಧಕರಿಗೆ ಒಪ್ಪಿಸಿಕೊಡತಕ್ಕದ್ದಲ್ಲ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅಬಿಲೇನ್ ಕ್ರಿಶ್ಚಿಯನ್ ಯುನಿವರ್ಸಿಟಿಯ ಪ್ರೆಸಿಡೆಂಟ್‌ರಾಗಿದ್ದ ಡೊನ್ ಮೊರ್ರಿಸ್ ಅವರು ಈ ಕೆಳಗಿನ ಕಥೆಯನ್ನು ಹೇಳಿದನು. ಅದು ಸತ್ಯದಂತೆ ನನಗೆ ಹೇಳಲ್ಪಟ್ಟಿತು. ಕ್ಯಾಂಪಸಿನಲ್ಲಿ ಒಂದು ರೀತಿಯ ಚರ್ಚೆಯು ಪ್ರಾರಂಭವಾಯಿತು. ಅದು ಯಾವುದರ ಬಗ್ಗೆ ಎಂದು ನನಗೆ ತಿಳಿದಿರಲಿಲ್ಲ; ಕಥೆಯ ಪ್ರಕಾರವಾಗಿ ಡೊನ್ ಮೊರ್ರಿಸ್‌ರಿಗಾಗಿ ಅದು ಮನಸ್ಸಾಕ್ಷಿಗೆ ಮತ್ತು ಸತ್ಯಕ್ಕೆ ಸಮರ್ಪಣೆಗೆ ಸಂಬಂಧದ್ದಾಗಿತ್ತು. ಕಥೆ ಮುಂದುವರಿಯುತ್ತದೆ, ಒಂದು ದಿನ ಡೊನ್ ಮೊರ್ರಿಸ್ ಅವರು

ಚಾಪಲಿನಲ್ಲಿ ಎದ್ದು ನಿಂತುಕೊಂಡು ಈ ರೀತಿಯಲ್ಲಿ ಹೇಳಿದರು: "ಈ ಕಾಲೇಜಿನ ಬೋರ್ಡ್ ಮತ್ತು ಆಡಳಿತಾಮಂಡಳಿ ಮತ್ತು ಅಧ್ಯಾಪಕ ವೃಂದ ಹಾಗೂ ವಿದ್ಯಾರ್ಥಿಗಳು ಸತ್ಯಕ್ಕಾಗಿ ನಿಂತು ಕೊಳ್ಳುವವರೆಗೆ, ನಾನು ಅವರೊಂದಿಗೆ ನಿಂತುಕೊಳ್ಳುತ್ತೇನೆ. ಆದರೆವಿದ್ಯಾರ್ಥಿಗಳು ಸತ್ಯವನ್ನು ತಿರಸ್ಕರಿಸಿದರೆ, ಬೋರ್ಡ್ ಮತ್ತು ಆಡಳಿತಾ ಮಂಡಳಿ ಮತ್ತು ಅಧ್ಯಾಪಕ ಮಂಡಳಿ ಸತ್ಯಕ್ಕಾಗಿ ನಿಂತರೆ, ನಾನು ಅವರೊಂದಿಗೆ ನಿಂತು ಕೊಳ್ಳುವೆನು. ಆದರೆ ಆಡಳಿತಾ ಮಂಡಳಿ ಮತ್ತು ಅಧ್ಯಾಪಕ ಮಂಡಳಿ ಬೆನ್ನು ಹಾಕಿ ಹೋದರೆ, ಬೋರ್ಡ್ಮತ್ತು ಅಧಿಕಾರ ಮಂಡಳಿ ಸತ್ಯಕ್ಕಾಗಿ ನಿಂತುಕೊಂಡರೆ ನಾನು ಅವರೊಂದಿಗೆ ನಿಂತು ಕೊಳ್ಳುವೆನು. ಆದರೆ ಅಧಿಕಾರ ಮಂಡಳಿ ಸತ್ಯವನ್ನು ತಿರಸ್ಕರಿಸಿದರೆ, ಕಾಲೇಜಿನ ಬೋರ್ಡ್ ಸತ್ಯಕ್ಕಾಗಿ ನಿಂತು ಕೊಂಡರೆ, ನಾನು ಅವರೊಂದಿಗೆ ನಿಂತು ಕೊಳ್ಳುತ್ತೇನೆ. ಆದರೆ ಬೋರ್ಡ್ ಮತ್ತು ಎಲ್ಲಾ ಇತರರು ಸತ್ಯವನ್ನು ತಿರಸ್ಕರಿಸಿದರೆ, ನಾನು ಒಬ್ಬನಾಗಿಯೇ ನಿಂತು ಕೊಳ್ಳುವೆನು!"

ಹಾಗೆಯೇ ಸ್ಥಳಿಕ ಸಭೆಯ ನಾಯಕರು, ಅತ್ಯಗತ್ಯವಾಗಿ ಕಂಡು ಬಂದಲ್ಲಿ, ಸತ್ಯಕ್ಕಾಗಿ ಒಬ್ಬರಿಗೆಯೇ ನಿಲ್ಲತಕ್ಕದ್ದು!

---

ಟಿಪ್ಪಣಿ

[1]See Coy Roper, "How Christians Can Disagree Without the Church Disintegrating," *Truth for Today* 10 (June 1989): 35-39.